ದಿನಾಂಕ 29-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 5 ನೇ ಪ್ರತಿವಾದಿ ಪರಃ ಶ್ರೀ.ಎಸ್.ಡಿ.ವಕೀಲರಿಂದಃ**

1ನೇ ವಾದಿ ಬೆಂಗಳೂರಿನಲ್ಲಿ ವಾಸ ಇದ್ದಾರೆ. 3ನೇ ವಾದಿ ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಈ ದಾವೆಯಲ್ಲಿ 5 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ. 1ನೇ ಪ್ರತಿವಾದಿಯ ತಂದೆ ದಿಃ ಅಪ್ಪಣ್ಣ ನಾಯ್ಕ ಯಾವತ್ತೂ ಕೂಡಾ ಭೂ ಸುಧಾರಣಾ ಕಾಯ್ದೆಯಡಿಯಲ್ಲಿ ಜಮೀನು ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿ.

2. ಪದ್ಮಾವತಿ ಎನ್ನುವವರು ಅಪ್ಪಣ್ಣ ನಾಯ್ಕ ರವರ ಹೆಂಡತಿ ಎಂದರೆ ಸರಿ. ದಾವೆಯಲ್ಲಿ ತೋರಿಸಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನಾವುದೇ ಸ್ವತ್ತುಗಳು ಇಲ್ಲ. ವಾದಪತ್ರದಲ್ಲಿ ತೋರಿಸಿರುವ ಸ್ವತ್ತುಗಳನ್ನು ಹೊರತುಪಡಿಸಿ ಇನ್ನಾವುದೇ ಸ್ವತ್ತುಗಳು ಮಂಜೂರಾಗಿಲ್ಲ. ದಿಃ 1ನೇ ಪ್ರತಿವಾದಿ ಪಾಲು ಪಟ್ಟಿಯ ಅಡಿಯಲ್ಲಿ 2 ಎಕರೆ 63 ಸೆಂಟ್ಸ್ ಜಾಗ ಬಂದಿರುತ್ತದೆ. 1ನೇ ಪ್ರತಿವಾದಿಗೆ ಪಾಲುಪಟ್ಟಿಯಡಿಯಲ್ಲಿ 6 ಎಕರೆ 36 ಸೆಂಟ್ಸ್ ನಷ್ಟು ಜಾಗ ಬಂದಿದೆ ಎಂದರೆ ಸರಿ ಸಾಕ್ಷಿ ಮುಂದುವರಿದು ಅದನ್ನು ಮನೆಯ ಅಗತ್ಯತೆಗಾಗಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಗೆ ಪಾಲುಪಟ್ಟಿಯಡಿಯಲ್ಲಿ ಬಂದ 6 ಎಕರೆ 36 ಸೆಂಟ್ಸ್ ಜಾಗದ ಕುರಿತು ನಾವು ಈ ದಾವೆಯನ್ನು ಸಲ್ಲಿಸಿಲ್ಲ. ನನ್ನ ಪ್ರಕಾರ 1ನೇ ಪ್ರತಿವಾದಿ ಎಷ್ಟು ಜಾಗವನ್ನು ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ಜಾಗವನ್ನು ಪಾಲು ಪಟ್ಟಿ ಆದ ನಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದ ನಾವು ಸಣ್ಣವರಿದ್ದಾಗಲೇ 1ನೇ ಪ್ರತಿವಾದಿ ಜಾಗವನ್ನು ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಯಾವ ನಿರ್ದಿಷ್ಟ ಸಾಲಿನಲ್ಲಿ ಆ ಮಾರಾಟ ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ.

3. 1ನೇ ಪ್ರತಿವಾದಿ ಮಾತ್ರ ಆ ಸ್ವತ್ತನ್ನು ಮಾರಾಟ ಮಾಡಿದ್ದಾರೆ . 1ನೇ ಪ್ರತಿವಾದಿಯ ತಾಯಿಯ ಜೊತೆ ಸೇರಿ ಮಾರಾಟ ಮಾಡಿಲ್ಲ. 1ನೇ ಪ್ರತಿವಾದಿಗೆ ಸ್ವತ್ತನ್ನು ಪಾಲುಪಟ್ಟಿ ಆದ ನಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿ ಸ್ವತ್ತುಗಳನ್ನು ತನ್ನ ತಮ್ಮ ಬಾಲಕೃಷ್ಣ ನಾಯ್ಕ ರವರ ಜೊತೆ ಪಾಲುಪಟ್ಟಿ ಮಾಡಿಕೊಂಡಿದ್ದರು ಎಂದರೆ ಸರಿ. ಆ ಪಾಲುಪಟ್ಟಿಯನ್ನು ದಿನಾಂಕ 08-12-1986 ರಂದು ಮಾಡಿಕೊಳ್ಳಲಾಗಿದೆ ಎಂದರೆ ಇರಬಹುದು. ಪಾಲುಪಟ್ಟಿಯ ಮುಖಾಂತರ ಬಂದ ಸ್ವತ್ತುಗಳಿಗೆ 1ನೇ ಪ್ರತಿವಾದಿಯೇ ಸಂಪೂರ್ಣ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. 5ನೇ

ಪ್ರತಿವಾದಿಗೆ ಸ್ವತ್ತನ್ನು ಆನಂದ ನಾಯ್ಕ ರವರು /1ನೇ ಪ್ರತಿವಾದಿ ಪಾಲುಪಟ್ಟಿ ಆದ ನಂತರ ಮಾರಾಟ ಮಾಡಿದ್ದಾರೆ ಎಂದರೆ ಸರಿ. 1ನೇ ಪ್ರತಿವಾದಿ ಸ್ವತ್ತುನ್ನು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಮೇಲೆ ಸದರಿ ಸ್ವತ್ತಿನ ರೆವೆನ್ಯೂ ದಾಖಲೆಗಳು 5ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ಸರಿ. 5ನೇ ಪ್ರತಿವಾದಿಯ ಹೆಸರಿಗೆ ರೆವೆನ್ಯೂ ದಾಖಲಾತಿಗಳು ಆದಾಗ ನಾವು ಚಿಕ್ಕವರಾಗಿದ್ದ ಕಾರಣ ತಕರಾರು ಸಲ್ಲಿಸಿಲ್ಲ.

4. 2016 ರಲ್ಲಿ ನನಗೆ 23 ವರ್ಷ ವಯಸ್ಸಾಗಿತ್ತು. 5ನೇ ಪ್ರತಿವಾದಿಗೆ 1ನೇ ಪ್ರತಿವಾದಿ ಮಾರಾಟ ಮಾಡಿದ ಸ್ವತ್ತುಗಳು ಆತನ ಸ್ವಂತ ಆಸ್ತಿಗಳು ಆಗಿತ್ತು ಎಂದರೆ ಸರಿಯಲ್ಲ. 5ನೇ ಪ್ರತಿವಾದಿಗೆ 1ನೇ ಪ್ರತಿವಾದಿಗೆ ಮಾರಾಟ ಮಾಡಿದ ಸ್ವತ್ತುಗಳಲ್ಲಿ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ. ನಾವು 5ನೇ ಪ್ರತಿವಾದಿಯ ಸಂಬಂಧ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 3ನೇ ಪ್ರತಿವಾದಿ ಪರಃ**

(3ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದು ನೀಡಲಾಯಿತು. )

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.